ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

**ಸಿ.ಸಿ. ಸಂಖ್ಯೆ.262/2023**

| | | |
|---|---|---|
| ಸಾಕ್ಷಿದಾರರ ಹೆಸರು | ಧನಂಜಯ್ | ಸಿ.ಡಬ್ಲ್ಯೂ: 13 ಪಿ.ಡಬ್ಲ್ಯೂ: 12 |
| ತಂದೆಯ ಹೆಸರು | ರಂಗೇಗೌಡ | |
| ವಯಸ್ಸು | 39 ವರ್ಷ | |
| ಉದ್ಯೋಗ | ಪಿ.ಎಸ್.ಐ, ಬಿ.ಎಂ.ಟಿ.ಎಫ್., ಬೆಂಗಳೂರು | |
| ವಾಸ ಸ್ಥಳ | ಬೆಂಗಳೂರು | |

ದಿನಾಂಕ: 04.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನಾನು ದಿ: 26.07.2021 ರಿಂದ ದಿ: 15.06.2023 ರವರೆಗೆ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 17.07.2022 ರಂದು ಚಾಸಾ.12 ರವರಿಂದ ಈ ಕೇಸಿನ ಕಡತವನ್ನು ಪಡೆದು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ ಆರೋಪಿಯ ಪತ್ತೆಗಾಗಿ ತೆರಳಿದ್ದು ಜನ್ನಾಪುರ ಸರ್ಕಲ್ ನಲ್ಲಿ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಆರೋಪಿ ಜಾಕೀರ್ ಹುಸೇನ್ ರವರನ್ನು ವಶಕ್ಕೆ ಪಡೆದು 2.15 ಕ್ಕೆ ಪೊಲೀಸ್ ಠಾಣೆಗೆ ಬಂದು ವಿಚಾರಣೆ ಮಾಡಿ ಆರೋಪಿ ಕೃತ್ಯದಲ್ಲಿ ಭಾಗಿಯಾಗಿದ್ದನ್ನು ಖಚಿತಪಡಿಸಿಕೊಂಡು, ಸರ್ವೋಚ್ಚ ನ್ಯಾಯಾಲಯದ ನಿಯಮಗಳನ್ನು ಪಾಲಿಸಿ ಬಂಧನ ಕ್ರಮ ಕೈಗೊಂಡಿರುತ್ತೇನೆ. ನಂತರ ಆರೋಪಿಯಿಂದ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿ ತನ್ನ ಹೇಳಿಕೆಯಲ್ಲಿ ಗೋಣಿಬೀಡು ಸರ್ಕಾರಿ ಶಾಲೆಯ ಖಾತೆಯಿಂದ ತನ್ನ ಖಾತೆಗೆ ಹಣವನ್ನು ವರ್ಗಾಯಿಸಿಕೊಂಡಿರುವುದು ಇದೇ ಮೊಬೈಲ್ ನಿಂದ ಎಂದು ತಿಳಿಸಿರುತ್ತಾರೆ. ಠಾಣೆಯಿಂದ ಹೊರಗೆ ಸಿಕ್ಕ ಪಂಚರಾದ ಚಾಸಾ.4 ಮತ್ತು 5 ರವರ ಸಮಕ್ಷಮ ಮಧ್ಯಾಹ್ನ 3.00 ರಿಂದ 4.00 ರವರೆಗೆ ಅಮಾನತ್ತು ಮಹಜರ್ ಮೂಲಕ One

Plus Touch Scree ಮೊಬೈಲ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ ಮೊಬೈಲ್ ಅನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 74/2022 ರಂತೆ ನಮೂದಿಸಿಕೊಂಡಿರುತ್ತೇನೆ.

3. ನಂತರ ತನಿಖೆಯನ್ನು ಮುಂದುವರೆಸಿ ಆರೋಪಿ ತನ್ನ ಖಾತೆಗೆ ವರ್ಗಾಯಿಸಿಕೊಂಡ ಹಣದಲ್ಲಿ 3 ಲಕ್ಷ ರೂ. ಗಳನ್ನು ತನ್ನ ಮನೆಯ ಬೀರುವಿನಲ್ಲಿ ಇಟ್ಟಿರುವುದಾಗಿ ಮತ್ತು ತನ್ನೊಂದಿಗೆ ಬಂದರೆ ತೋರಿಸುವುದಾಗಿ ಹೇಳಿದ ಮೇರೆಗೆ ಪಂಚರಾದ ಚಾಸಾ.4 ಮತ್ತು 5 ರವರೊಂದಿಗೆ ಆರೋಪಿಯ ಮನೆಗೆ ಹೋಗಿದ್ದು, ಆರೋಪಿ ತನ್ನ ಮನೆಯಲ್ಲಿ ಇದ್ದ ಗಾಡ್ರೇಜ್ ಬೀರುವನ್ನು ತೆಗೆದು ಅದರಲ್ಲಿ ಇದ್ದ 3 ಲಕ್ಷ ಹಣವನ್ನು ತೋರಿಸಿರುತ್ತಾರೆ. ಸದರಿ ಹಣವನ್ನು ಪಂಚರ ಸಮಕ್ಷಮ ಸಂಜೆ 4.30 ರಿಂದ 5.30 ರವರೆಗೆ ಅಮಾನತ್ತು ಮಹಜರ್ ಮೂಲಕ ವಶಕ್ಕೆ ಪಡೆದಿರುತ್ತೇನೆ.

4. ನಂತರ ವಶಕ್ಕೆ ಪಡೆದ ಹಣ ಮತ್ತು ಆರೋಪಿಯೊಂದಿಗೆ ಠಾಣೆಗೆ ಬಂದು ವಶಪಡಿಸಿಕೊಂಡ ಹಣವನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 75/2022 ರಂತೆ ನಮೂದಿಸಿಕೊಂಡಿರುತ್ತೇನೆ. ನಂತರ ಆರೋಪಿಯು ಮುಂದಿನ ತನಿಖೆಗೆ ಅವಶ್ಯಕತೆ ಇಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆನರಾ ಬ್ಯಾಂಕ್ ಮೂಡಿಗೆರೆ ಶಾಖೆಯವರಿಗೆ ದಾಖಲೆಯನ್ನು ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತೇನೆ. ಕರ್ನಾಟಕ ಬ್ಯಾಂಕ್ ಗೋಣಿಬೀಡು ಶಾಖೆ ರವರಿಂದ ದಾಖಲೆಗಳನ್ನು ನೀಡುವಂತೆ ಮನವಿಯನ್ನು ಸಲ್ಲಿಸಿರುತ್ತೇನೆ. ಅಕ್ಷರ ದಾಸೋಹ ಮೂಡಿಗೆರೆ ರವರಿಗೆ ದಾಖಲೆಗಳನ್ನು ಕೋರಿ ಮನವಿಯನ್ನು ಸಲ್ಲಿಸಿರುತ್ತೇನೆ. ಚಾಸಾ.1 ರವರಿಗೆ ದಾಖಲೆಗಳನ್ನು ಹಾಜರು ಪಡಿಸುವಂತೆ ನೋಟೀಸು ಜಾರಿ ಮಾಡಿರುತ್ತೇನೆ.

5. ದಿಃ 30.07.2022 ರಂದು ಚಾಸಾ.1 ರವರಿಗೆ ನ್ಯಾಯಾಲಯದ ಆದೇಶದಂತೆ ವಶಪಡಿಸಿಕೊಂಡ 3 ಲಕ್ಷ ಹಣವನ್ನು ಮಹಜರ್ ಮೂಲಕ ನೀಡಿರುತ್ತೇನೆ. ದಿಃ 06.08.2022 ರಂದು ಚಾಸಾ.1 ರವರು ಬ್ಯಾಂಕಿಗೆ ಹಣವನ್ನು ಜಮೇ ಮಾಡಿದ ಬಗ್ಗೆ ರಸೀದಿಯನ್ನು ಹಾಜರು ಪಡಿಸಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ.

6. ದಿಃ 22.02.2023 ರಂದು ಕೆನರಾ ಬ್ಯಾಂಕ್ ಮೂಡಿಗೆರೆ ರವರಿಂದ ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 15.03.2023 ರಂದು ಅಕ್ಷರ ದಾಸೋಹ ಕಚೇರಿ ಮೂಡಿಗೆರೆ ರವರಿಂದ ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ನನಗೆ ವರ್ಗಾವಣೆಯಾದ ಕಾರಣ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.14 ರವರಿಗೆ ವಹಿಸಿಕೊಟ್ಟಿರುತ್ತೇನೆ.

7. ನಿ.ಪಿ.2 ಸ್ವತ್ತು ಬಿಡುಗಡೆ ಮಹಜರ್ ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು. ನಿ.ಪಿ.3 ಮತ್ತು 4 ಛಾಯಚಿತ್ರಗಳಲ್ಲಿ ನಾನು ಹಾಜರಿರುತ್ತೇನೆ. ನಿ.ಪಿ.5 ಕೆನರಾ ಬ್ಯಾಂಕಿಗೆ ಹಣ ಜಮೇ ಮಾಡಿದ ರಸೀದಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ನಿ.ಪಿ.6 ಮೊಬೈಲ್ ಅಮಾನತ್ತು ಮಹಜರ್ ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.6(ಸಿ) ಎಂದು ಗುರುತಿಸಲಾಯಿತು.ನಿ.ಪಿ.7 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ನಿ.ಪಿ.8 ಹಣ ಅಮಾನತ್ತು ಮಹಜರ್ ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.8(ಸಿ) ಎಂದು ಗುರುತಿಸಲಾಯಿತು. ನಿ.ಪಿ.9 ರಿಂದ 12 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ನಿ.ಪಿ.13 ಮತ್ತು 14 ಪಂಚರಿಗೆ ನೀಡಿದ ನೋಟೀಸಿನಲ್ಲಿ ಇರುವ ಸಹಿಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಗಳನ್ನು ನಿ.ಪಿ.13(ಬಿ) ಮತ್ತು ನಿ.ಪಿ.14(ಬಿ) ಎಂದು ಗುರುತಿಸಲಾಯಿತು.

8. ನಿ.ಪಿ.15 ಕೆನರಾ ಬ್ಯಾಂಕ್ ಮೂಡಿಗೆರೆ ರವರಿಗೆ ಬರೆದ ಪತ್ರದಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.15(ಎ) ಎಂದು, ನಿ.ಪಿ.16 ಕೆನರಾ ಬ್ಯಾಂಕಿನಿಂದ ಪಡೆದ ವರದಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು. ಕೆ.ವೈ.ಸಿ ಗಾಗಿ ಬ್ಯಾಂಕಿಗೆ ಶಿವೇಗೌಡ ಮತ್ತು ವಹಿದಾ ಬಾನು ರವರು ಸಲ್ಲಿಸಿದ ನಿ.ಪಿ.17 ರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು

ನಿ.ಪಿ.17(ಎ) ಎಂದು ಗುರುತಿಸಲಾಯಿತು. ನಿ.ಪಿ.18 ಅಕ್ಷರ ದಾಸೋಹ ಕೆನರಾ ಬ್ಯಾಂಕಿನ ಖಾತೆಯ extract ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.18(ಎ) ಎಂದು ಗುರುತಿಸಲಾಯಿತು. ನಿ.ಪಿ.19 ಮೊಬೈಲ್ ಬ್ಯಾಂಕಿಂಗ್ ಮೂಲಕ ಹಣ ವರ್ಗಾವಣೆ ಮಾಡಿದ ಕೆನರಾ ಬ್ಯಾಂಕಿನ ಖಾತೆಯ extract ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಅಕ್ಷರ ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಹೆಸರಿನಲ್ಲಿ ಖಾತೆಯನ್ನು ತೆರೆಯಲು ಕೆನರಾ ಬ್ಯಾಂಕಿಗೆ ಸಲ್ಲಿಸಿದ ನಿ.ಪಿ.20 ಅರ್ಜಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.20(ಎ) ಎಂದು ಗುರುತಿಸಲಾಯಿತು. ವಹಿದಾ ಬಾನು ರವರು ಸಲ್ಲಿಸಿದ ನಿ.ಪಿ.21 ಫಾರಂ ನಂಬರ್ 60 ರಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.21(ಎ) ಎಂದು ಗುರುತಿಸಲಾಯಿತು. ವಹಿದಾ ಬಾನು ರವರು ನಿ.ಪಿ.22 ರಂತೆ ಕೆನರಾ ಬ್ಯಾಂಕಿನಲ್ಲಿ ಖಾತೆ ತೆರೆಯಲು ಸಲ್ಲಿಸಿದ ಅರ್ಜಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.22(ಎ) ಎಂದು ಗುರುತಿಸಲಾಯಿತು. ನಿ.ಪಿ.23 ರಂತೆ ಕೆನರಾ ಬ್ಯಾಂಕ್ ಮ್ಯಾನೇಜರ್ ರವರಿಗೆ ಬರೆದ ಪತ್ರದ ನಿವೇದನೆಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.23(ಎ) ಎಂದು ಗುರುತಿಸಲಾಯಿತು. ನಿ.ಪಿ.24 ರಂತೆ ಕೆನರಾ ಬ್ಯಾಂಕ್ ನಿಂದ ಪಡೆದ ವರದಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು. ವಹಿದಾ ಬಾನು ರವರ ನಿ.ಪಿ.25 ರಂತೆ ಮತದಾನದ ಗುರುತಿನ ಚೀಟಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.25(ಎ) ಎಂದು ಗುರುತಿಸಲಾಯಿತು. ವಹಿದಾ ಬಾನು ರವರ ನಿ.ಪಿ.26 ರಂತೆ ಕೆನರಾ ಬ್ಯಾಂಕ್ ನ ಖಾತೆಯ account extract ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.26(ಎ) ಎಂದು ಗುರುತಿಸಲಾಯಿತು.

9. ನಿ.ಪಿ.27 ರಂತೆ ಕೆನರಾ ಬ್ಯಾಂಕ್ ಮೂಡಿಗೆರೆ ರವರು ನೀಡಿದ ವರದಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.27(ಎ) ಎಂದು ಗುರುತಿಸಲಾಯಿತು. ನಿ.ಪಿ.28 ಮತ್ತು 29 ರಂತೆ ಕೆನರಾ ಬ್ಯಾಂಕ್ ಮೂಡಿಗೆರೆ ರವರು ದಿಃ 29.09.2023 ರಂದು ನೀಡಿದ 2 ವರದಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.28(ಎ) ಮತ್ತು ನಿ.ಪಿ.29(ಎ) ಎಂದು ಗುರುತಿಸಲಾಯಿತು. ನಿ.ಪಿ.30 ರಂತೆ ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಸರ್ಕಾರಿ ಶಾಲೆಯಿಂದ ಮೊಬೈಲ್ ಬ್ಯಾಂಕಿಂಗ್ ಮೂಲಕ ಹಣ ವರ್ಗಾವಣೆಯಾದ Account extract ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.30(ಎ) ಎಂದು ಗುರುತಿಸಲಾಯಿತು. ನಿ.ಪಿ.31 ರಂತೆ ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಸರ್ಕಾರಿ ಶಾಲೆಯ ಕೆನರಾ ಬ್ಯಾಂಕ್ ಗೆ ಸಂಬಂಧಿಸಿದಂತೆ ನೀಡಿದ ವಿವರದಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.31(ಎ) ಎಂದು ಗುರುತಿಸಲಾಯಿತು. ನಿ.ಪಿ.32 ರಂತೆ ಅಕ್ಷರ ದಾಸೋಹ ಮೂಡಿಗೆರೆ ರವರು ನೀಡಿದ ವರದಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.32(ಬಿ) ಎಂದು ಗುರುತಿಸಲಾಯಿತು. ನಿ.ಪಿ.33 ಅನುಧಾನ ಜಮಾ ಮೊತ್ತಕ್ಕೆ ಸಂಬಂಧಿಸಿದ ದಾಖಲೆಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.33(ಬಿ) ಎಂದು ಗುರುತಿಸಲಾಯಿತು. ನಿ.ಪಿ.34 ರಿಂದ ನಿ.ಪಿ.39 ದಾಖಲೆಯಲ್ಲಿ ಇರುವ ಸಹಿಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಗಳನ್ನು ನಿ.ಪಿ.34(ಬಿ) ರಿಂದ ನಿ.ಪಿ.39(ಬಿ) ಎಂದು ಗುರುತಿಸಲಾಯಿತು.

10. ನಿ.ಪಿ.40 ರಂತೆ ಕರ್ನಾಟಕ ಬ್ಯಾಂಕ್ ಗೋಣಿಬೀಡು ರವರಿಗೆ ಬರೆದ ಪತ್ರದಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.40(ಎ) ಎಂದು ಗುರುತಿಸಲಾಯಿತು. ಅಕ್ಷರ ದಾಸೋಹ ಮೂಡಿಗೆರೆ ರವರಿಗೆ ಬರೆದ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.44 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.44(ಎ) ಎಂದು ಗುರುತಿಸಲಾಯಿತು. ಮುಖ್ಯ ಶಿಕ್ಷಕರು, ಗೋಣಿಬೀಡು ಸರ್ಕಾರಿ ಶಾಲೆ ರವರಿಗೆ ನೀಡಿದ ನೋಟೀಸನ್ನು ಸಾಕ್ಷಿ

ನೋಡಿ ಗುರುತಿಸಿದ್ದು ಅದನ್ನು ನಿ.ಪಿ.45 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.45(ಎ) ಎಂದು ಗುರುತಿಸಲಾಯಿತು. ಚಾಸಾ.1 ರವರಿಂದ ಪಡೆದ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.46 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.46(ಎ) ಎಂದು ಗುರುತಿಸಲಾಯಿತು. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.47 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.47(ಎ) ಎಂದು ಗುರುತಿಸಲಾಯಿತು. ಚಾಸಾ.10 ರವರಿಂದ ಛಾಯಚಿತ್ರಗಳಿಗೆ ಸಂಬಂಧಿಸಿದಂತೆ ಭಾರತೀಯ ಸಾಕ್ಷಿ ಅಧಿನಿಯಮದ ಕಲಂ 65(ಬಿ) ರಡಿಯಲ್ಲಿ ಪಡೆದ ಪ್ರಮಾಣ ಪತ್ರ, ಮಹಜರ್ ಕಾಲದಲ್ಲಿ ತೆಗೆದ ಛಾಯಚಿತ್ರಗಳಿಗೆ ಸಂಬಂಧಿಸಿದಂತೆ ನಾನು ಭಾರತೀಯ ಸಾಕ್ಷಿ ಅಧಿನಿಯಮದ ಕಲಂ 65(ಬಿ) ರಡಿಯಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**11.** ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ಪ್ರಮಾಣ ಪತ್ರಗಳು ಮತ್ತು ಸಿ.ಡಿ ಭಾರತೀಯ ಸಾಕ್ಷಿ ಅಧಿನಿಯಮದ ಕಲಂ **65(ಬಿ)** ರಡಿಯಲ್ಲಿ ತಿಳಿಸಿರುವ ಕ್ರಮದಂತೆ ಇಲ್ಲ, ಆ ಕಾರಣದಿಂದ ಸದರಿ ದಾಖಲೆಗಳನ್ನು ಗುರುತಿಸುವಲ್ಲಿ ತಮ್ಮ ತಕರಾರು ಇರುತ್ತದೆ ಎಂಬ ತಕರಾರನ್ನು ತೆಗೆದಿರುತ್ತಾರೆ. ಆದ್ದರಿಂದ ಸದರಿ ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಮತ್ತು ಸದರಿ ದಾಖಲೆಗಳನ್ನು ಅಭಿಯೋಜನೆಯು ರುಜುವಾತುಪಡಿಸುವ ಹೊಣೆಗಾರಿಕೆಗೆ ಒಳಪಟ್ಟು **2** ಪ್ರಮಾಣ ಪತ್ರಗಳನ್ನು ಮತ್ತು ಸಿ.ಡಿ ಯನ್ನು ನಿ.ಪಿ.**48** ರಿಂದ **50** ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.**48(ಎ)** ಮತ್ತು ನಿ.ಪಿ.**49(ಎ)** ಎಂದು ಗುರುತಿಸಲಾಯಿತು.

12. ಆ ದಿನ ಆರೋಪಿಯಿಂದ ವಶಕ್ಕೆ ಪಡೆದ ಮೊಬೈಲ್ ಇದೇ ಆಗಿರುತ್ತದೆ ಎಂದು ಸಾಕ್ಷಿ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು ಮೊಬೈಲ್ ಅನ್ನು ಮು.ಮಾ.1 ಎಂದು, ಮು.ಮಾ.1 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಪುನಃ ನೋಡಿದರೆ ಗುರುತಿಸಬಲ್ಲೆ. (ಆರೋಪಿಯನ್ನು

ಗುರುತಿಸುವಲ್ಲಿ ತಮ್ಮ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಆರೋಪಿಯ ಗೈರು ಹಾಜರಿಯ ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ.)

<u>ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ – ಆರೋಪಿತನ ಪರವಾಗಿ</u>

13. ಚಾಸಾ.12 ರವರಿಂದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.12 ರವರಿಂದ ಈ ಕೇಸಿನ ಕಡತವನ್ನು ಪಡೆದಾಗ ಕಡತದಲ್ಲಿ ಚಾಸಾ.1 ರವರು ಬಿ.ಇ.ಓ ರವರಿಗೆ ಬರೆದ ಯಾವುದೇ ಪತ್ರ ಕಂಡು ಬರಲಿಲ್ಲ. ದೂರು ಯಾರ ಕೈ ಬರವಣಿಗೆಯಲ್ಲಿ ಇದೆ ಎಂದು ನಾನು ತಿಳಿದುಕೊಳ್ಳಲಿಲ್ಲ. ಚಾಸಾ.12 ರವರು ಯಾವುದಾದರು ಖಾತೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪಡೆದುಕೊಂಡದ್ದು ಕಡತದಲ್ಲಿ ಕಂಡು ಬರಲಿಲ್ಲ. ಚಾಸಾ.1 ರವರಿಗೆ ಹಣವನ್ನು ಬಿಡುಗಡೆ ಮಾಡಬೇಕು ಎಂದು ನ್ಯಾಯಾಲಯ ಹೊರಡಿಸಿದ ಆದೇಶವನ್ನು ನನಗೆ ಚಾಸಾ.1 ರವರು ನೀಡಿದ್ದರು. ಸದರಿ ಆದೇಶವನ್ನು ದಿಃ 30.07.2022 ರಂದು ನನಗೆ ಚಾಸಾ.1 ರವರು ನೀಡಿದ್ದರು. ನ್ಯಾಯಾಲಯ ಹೊರಡಿಸಿದ ಆದೇಶದಲ್ಲಿ ಹಣವನ್ನು ಬಿಡುಗಡೆ ಮಾಡುವಾಗ ಮಹಜರ್ ಮಾಡಿ ಛಾಯಚಿತ್ರವನ್ನು ತೆಗೆದು ಮಹಜರ್ ಗೆ ತಗುಲುವ ವೆಚ್ಚವನ್ನು ಚಾಸಾ.1 ರವರು ಭರಿಸುವಂತೆ ಆದೇಶದಲ್ಲಿ ತಿಳಿಸಿತ್ತು. ನ್ಯಾಯಾಲಯ ನೀಡಿದ release intimation ಅನ್ನು ಸಾಕ್ಷಿ ಗೆ ತೋರಿಸಿ ಕೇಳಲಾಗಿ ಸಾಕ್ಷಿ ಹೌದು ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಡಿ.5 ಎಂದು ಗುರುತಿಸಲಾಯಿತು. ನಿ.ಡಿ.5 ರಲ್ಲಿ ಅರ್ಜಿದಾರರು ಹಣವನ್ನು ನ್ಯಾಯಾಲಯ ಯಾವಾಗ ಕೇಳುತ್ತದೆಯೋ ಆ ಸಮಯದಲ್ಲಿ ಹಾಜರು ಪಡಿಸಬೇಕು ಎಂಬ ಷರತ್ತು ಇದೆ ಎಂದರೆ ಸರಿ. ಸದರಿ ಷರತನ್ನು ಉಲ್ಲಂಘನೆ ಮಾಡಿ ನಾನು ನಿ.ಪಿ.5 ದಾಖಲೆಯನ್ನು ಚಾಸಾ.1 ರವರಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.5 ಜೆರಾಕ್ಸ್ ಪ್ರತಿ ಎಂದರೆ ಸರಿ. ನಿ.ಪಿ.5 ರ ಮೂಲ ದಾಖಲೆಯನ್ನು ಪಡೆದುಕೊಳ್ಳಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಮೂಲ ದಾಖಲೆ ಅವರಿಗೆ ಸೇರಿದ್ದರಿಂದ ಜೆರಾಕ್ಸ್ ಪ್ರತಿಯನ್ನು ಪಡೆದುಕೊಂಡೆ ಎಂದು ನುಡಿಯುತ್ತಾರೆ. ದಿಃ 01.08.2022 ರಂದು ಚಾಸಾ.1 ರವರು ಬ್ಯಾಂಕಿಗೆ

3 ಲಕ್ಷ ಹಣವನ್ನು ಪಡೆದ ಬಗ್ಗೆ ದಾಖಲೆಗಳನ್ನು ಬ್ಯಾಂಕಿನಿಂದ ಪಡೆದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ನಿ.ಪಿ.5 ಆ ದಾಖಲೆ ಆಗಿರುವುದರಿಂದ ಬೇರೆ ದಾಖಲೆಗಳನ್ನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.5 ದಾಖಲೆಯ ಆಧಾರದ ಮೇಲೆ ಚಾಸಾ.1 ರವರು ಬ್ಯಾಂಕಿಗೆ 3 ಲಕ್ಷ ಹಣವನ್ನು ಪಾವತಿಸಿದ್ದಾರೆ ಎಂಬ ನಿರ್ಣಯಕ್ಕೆ ಬಂದಿದ್ದೀರಾ ಎಂದರೆ ಹೌದು. ನಾನು ಹಾಜರು ಪಡಿಸಿರುವ ಬ್ಯಾಂಕಿನ ದಾಖಲೆಗಳಲ್ಲಿ ಚಾಸಾ.1 ರವರು ದಿಃ 01.08.2022 ರಂದು 3 ಲಕ್ಷ ಹಣವನ್ನು ಬ್ಯಾಂಕಿಗೆ ಪಾವತಿಸಿದ್ದಾರೆ ಎಂಬ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ.

14. ನಿ.ಪಿ.8 ರಲ್ಲಿ ಇರುವ ಬರವಣಿಗೆ ಯಾರು ಬರೆದಿದ್ದರು ಎಂದು ನನಗೆ ನೆನಪಿಲ್ಲ. ನಿ.ಪಿ.8 ಅನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ನಿ.ಪಿ.8 ಅನ್ನು ಬರೆಯಲು ಮಾಹಿತಿಯನ್ನು ನೀಡುವಾಗ ಈ ಕೇಸಿನ ದಾಖಲೆಗಳನ್ನು ನೋಡಿ ಮಾಹಿತಿಯನ್ನು ನೀಡಿದ್ದೆ ಎಂದರೆ ಸರಿ. ನಿ.ಪಿ.8 ರ ಕಾಲಂ ನಂಬರ್ 8 ರಲ್ಲಿ ಕಾಣಿಸಿರುವ ಖಾತೆಯ ಸಂಖ್ಯೆ 1163101016113 ಅಕ್ಷರ ದಾಸೋಹಕ್ಕೆ ಸೇರಿದ್ದು. ಸಾಕ್ಷಿ ಸ್ವತಃ ಆರೋಪಿ ತನ್ನ ಹೇಳಿಕೆಯಲ್ಲಿ ಹೇಳಿದಂತೆ ಆ ಖಾತೆ ಸಂಖ್ಯೆಯನ್ನು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಮಹಜರ್ ತಯಾರಿಸುವಾಗ ಆ ಖಾತೆಯ ಸಂಖ್ಯೆಯನ್ನು ತಿಳಿಸಿದ್ದ. ಆರೋಪಿ ಹೇಳಿದಂತೆ ಸದರಿ ಖಾತೆಯನ್ನು ಮಹಜರ್ ನಲ್ಲಿ ನಮೂದಿಸಿದ್ದೇನೆ ಎಂದು ನಿ.ಪಿ.8 ರಲ್ಲಿ ಬರೆದಿದ್ದೀರಾ ಎಂದರೆ ಸಾಕ್ಷಿ ಆರಂಭದಿಂದಲು ಆರೋಪಿ ಹೇಳಿದಂತೆ ನಿ.ಪಿ.8 ಅನ್ನು ಬರೆದಿದ್ದೇನೆ ಎಂದು ನುಡಿಯುತ್ತಾರೆ. ನಿ.ಪಿ.47 ರಲ್ಲಿ ಆರೋಪಿ ಖಾತೆ ಸಂಖ್ಯೆಯನ್ನು ಹೇಳಿದ ವಿವರ ಕಂಡು ಬರುವುದಿಲ್ಲ ಎಂದರೆ ಸರಿ.

15. ನಿ.ಪಿ.6 ಮೊಬೈಲ್ ಮಹಜರ್ ನಲ್ಲಿಯು ಸಹ ನಿ.ಪಿ.8 ರಲ್ಲಿ ನಮೂದಿಸಿರುವ ಅಕ್ಷರ ದಾಸೋಹದ ಖಾತೆ ಸಂಖ್ಯೆ 1163101016113 ಅನ್ನು ನಮೂದಿಸಿದ್ದೇನೆ ಎಂದರೆ ಸರಿ. ನಿ.ಪಿ.6 ಮಹಜರ್ ಅನ್ನು ಬರೆದವರ ಹೆಸರು ನೆನಪಿಲ್ಲ. ನಿ.ಪಿ.6 ಮಹಜರ್ ಅನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ನಿ.ಪಿ.9 ಮತ್ತು 10 ಛಾಯಚಿತ್ರಗಳಲ್ಲಿ ಹಣ ಕಂಡು

ಬರುವುದಿಲ್ಲ ಎಂದರೆ ಸಾಕ್ಷಿ ನಿ.ಪಿ.10 ಛಾಯಚಿತ್ರದಲ್ಲಿ ಹಣ ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.9 ರಿಂದ 12 ಛಾಯಚಿತ್ರಗಳನ್ನು ನಮ್ಮ ಅಗತ್ಯತೆಗಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.3 ರಿಂದ 5 ರ ಛಾಯಚಿತ್ರದಲ್ಲಿ ಬಿಳಿ ಬಟ್ಟೆಯಿಂದ ಸುತ್ತಿರುವ ಮತ್ತು ಸೀಲು ಹಾಕಿರುವ ವಸ್ತು ಕಂಡು ಬರುವುದಿಲ್ಲ ಎಂದರೆ ಸರಿ. ನಿ.ಪಿ.8 ಮಹಜರ್ ಮಾಡುವ ಕಾಲದಲ್ಲಿ ಮಾದರಿ ಸೀಲು ಮಾಡಿಸಿ ಅದನ್ನು ಮಾದರಿ ಚೀಟಿಗೆ ಅಂಟಿಸಿ ಸಾಕ್ಷಿದಾರರ ಸಹಿಯನ್ನು ಪಡೆದಿದ್ದೇನೆ. ಆ ರೀತಿಯ ಯಾವುದೇ ದಾಖಲೆ ಇಲ್ಲದೇ ಇದ್ದರು ಸಹ ಮಾಡಿಸಿ ಸಹಿ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ನಿ.ಪಿ.8 ಮಹಜರ್ ನಲ್ಲಿ ನೋಟೀನ ಸಿರಿಯಲ್ ನಂಬರ್ ಮತ್ತು ಮುಖ ಬೆಲೆಗಳನ್ನು ನಮೂದಿಸಿಲ್ಲ. ನಿ.ಪಿ.2 ಮಹಜರ್ ನಲ್ಲಿಯು ಸಹ ನೋಟೀನ ಸಿರಿಯಲ್ ನಂಬರ್ ಮತ್ತು ಮುಖ ಬೆಲೆಗಳನ್ನು ನಮೂದಿಸಿಲ್ಲ. ನಿಪಿ.2 ಮಹಜರ್ ಮಾಡುವಾಗ ತೆಗೆದ ಛಾಯಚಿತ್ರದ ಸಿ.ಡಿ ಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಎಲ್ಲಾ ಛಾಯಚಿತ್ರವನ್ನು ನಿ.ಪಿ.50 ರಲ್ಲಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಈ ಕೇಸಿನಲ್ಲಿ ಹಾಜರು ಪಡಿಸಿರುವ ಎಲ್ಲಾ ಛಾಯಚಿತ್ರವನ್ನು ಸಹ ನಿ.ಪಿ.50 ಸಿ.ಡಿ ಯಲ್ಲಿ ಹಾಕಿರುತ್ತೇನೆ. ನಿ.ಪಿ.50 ಸಿ.ಡಿ ಯಲ್ಲಿ ಎಲ್ಲಾ ಛಾಯಚಿತ್ರಗಳನ್ನು ಅಳವಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ನಿ.ಪಿ.2 ಮಹಜರ್ ನಂತೆ ಚಾಸಾ.1 ರವರಿಗೆ ಹಣ ಬಿಡುಗಡೆ ಮಾಡಿದಾಗ ಮಧ್ಯಾಹ್ನ 1.00 ರಿಂದ 1.30 ರ ಸಮಯ ಆಗಿತ್ತು. ಹಣ ವಶಪಡಿಸಿಕೊಳ್ಳಲು ಆರೋಪಿಯ ಮನೆಗೆ ಹೋದಾಗ ಆ ಮನೆಯಲ್ಲಿ 2 ರಿಂದ 3 ಜನ ವಾಸವಿದ್ದರು. ಮನೆಯಲ್ಲಿ ವಾಸವಿದ್ದವರಿಗೆ ಅಮಾನತ್ತು ಪಡಿಸಿಕೊಂಡಿದ್ದ ಮಾಲಿನ ಪಟ್ಟಿಯ ವಿವರವನ್ನು ಬರೆದು ನೀಡಿಲ್ಲ. ಆರೋಪಿಯ ಮನೆಯ ಮುಂದೆ ಕಾರಿಡಾರ್ ಇದೆ ಎಂದರೆ ನನಗೆ ನೆನಪಿಲ್ಲ. ಆ ಮನೆಯಲ್ಲಿ ಎಷ್ಟು ರೂಮ್ ಗಳು ಇದ್ದವು ಎಂದು ಸುಮಾರು ದಿನ ಆದ ಕಾರಣ ನೆನಪಿಲ್ಲ. ಚಾಸಾ.1 ರವರಿಗೆ ಹಣವನ್ನು ಬಿಡುಗಡೆ

ಮಾಡಿದ ಬಳಿಕ ಬಿಳಿ ಬಟ್ಟೆ ಮತ್ತು ಅದರ ಮೇಲೆ ಇರುವ ಸೀಲನ್ನು ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿಲ್ಲ.

18. ನಿ.ಪಿ.13 ಮತ್ತು 14 ನೋಟೀಸುಗಳಲ್ಲಿ ನೋಟೀಸು ನೀಡಿದ ಸಮಯ ಮತ್ತು ಸ್ಥಳ ಕಂಡು ಬರುವುದಿಲ್ಲ ಎಂದರೆ ಸರಿ. ನಿ.ಪಿ.18 ರಲ್ಲಿ ಪಾರ್ವತಮ್ಮ ಎಂಬ ಹೆಸರು ಕಂಡು ಬರುತ್ತದೆ ಎಂದರೆ ಸಾಕ್ಷಿ Joint Holder ಎಂದು ಕಂಡು ಬರುತ್ತದೆ ಎಂದು ನುಡಿಯುತ್ತಾರೆ. Joint Holder ಎಂದರೆ ಇಬ್ಬರು ಅಥವ ಅದಕ್ಕಿಂತ ಹೆಚ್ಚಿನವರು ಆಗಿರುತ್ತಾರೆ ಎಂದರೆ ಸರಿ. ನಿ.ಪಿ.18 ರಲ್ಲಿ ನಮೂದಿಸಿರುವ Joint Holder ಬಗ್ಗೆ ವಿಚಾರಿಸಿ ಹೆಚ್ಚಿನ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ನಿ.ಪಿ.18 ರಲ್ಲಿ ನಮೂದಿಸಿರುವ Joint Holder ಗೆ ಸಂಬಂಧಿಸಿದಂತೆ ಅವರ ವಿವರಗಳನ್ನು ಪಡೆದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಆ ರೀತಿಯ ಯಾವುದೇ ಮಾಹಿತಿಯನ್ನು ಪಡೆದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಿ.ಪಿ.20 ರಲ್ಲಿ ಆ ವಿವರ ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.20 ದಾಖಲೆ ಖಾತೆಯನ್ನು ಬ್ಯಾಂಕಿನಲ್ಲಿ ತೆರೆಯುವವರು ಸಲ್ಲಿಸಿದ ದಾಖಲೆ ಎಂದರೆ ಸರಿ. ಸಾಕ್ಷಿ ಸ್ವತಃ ನಿ.ಪಿ.20 ದಾಖಲೆಯನ್ನು ಬ್ಯಾಂಕಿನವರು ನಮಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.28 ಪತ್ರವನ್ನು ನಾನು ನಿವೇದನೆ ಸಲ್ಲಿಸಿದ 2 ತಿಂಗಳ ಬಳಿಕ ಬ್ಯಾಂಕಿನವರು ನೀಡಿದ್ದಾರೆ ಎಂದರೆ ಸರಿ.

19. ಪ್ರತಿಯೊಂದು ಬ್ಯಾಂಕಿನ ಶಾಖೆಗೆ ಪ್ರತ್ಯೇಕ IFSC code ಇರುತ್ತವೆ ಎಂದರೆ ಸರಿ. ನಿ.ಪಿ.30 ರಲ್ಲಿ ಬೇರೆ ಬೇರೆ IFSC code ಗಳು ನಮೂದಾಗಿವೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿ.ಪಿ.30 ರಲ್ಲಿ IFSC code ಗಳು ಬೇರೆ ಬೇರೆ ಇರುವುದರಿಂದ ಆ IFSC code ಗಳು ಯಾವ ಯಾವ ಶಾಖೆಗೆ ಸೇರಿದ್ದು ಎಂದು ತಿಳಿದುಕೊಳ್ಳಲು ಯತ್ನಿಸಿದ್ದೀರಾ ಎಂದರೆ ಸಾಕ್ಷಿ ಸದರಿ ಖಾತೆ ಆರೋಪಿ ಜಾಕೀರ್ ಹುಸೇನ್ ರವರ ಹೆಸರಿನಲ್ಲಿ ಇದುದ್ದರಿಂದ ವಿಚಾರಿಸಿಲ್ಲ ಎಂದು ನುಡಿಯುತ್ತಾರೆ. IFSC code ಗಳು

ಯಾವ ಯಾವ ಖಾತೆಗೆ ಸಂಬಂಧಿಸಿದ್ದು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸದರಿ ಖಾತೆ ಆರೋಪಿ ಜಾಕೀರ್ ಹುಸೇನ್ ರವರ ಹೆಸರಿನಲ್ಲಿ ಇದುದ್ದರಿಂದ ವಿಚಾರಿಸಿಲ್ಲ ಎಂದು ನುಡಿಯುತ್ತಾರೆ.

20. ನಿ.ಪಿ.18 ರ ದಿಃ 16.05.2022 ರಂದು ಆದ ವಹಿವಾಟು ವನಜಾ ಎಂಬುವವರ ಹೆಸರಿನಲ್ಲಿ ಆಗಿದೆ ಎಂದರೆ ಸಾಕ್ಷಿ ಅಕ್ಷರ ದಾಸೋಹ ಖಾತೆಯಿಂದ ಬೇರೆ ಬೇರೆಯವರ ಹೆಸರಿಗೆ ಹೋಗಿದೆ ಎಂದು ನುಡಿಯುತ್ತಾರೆ. ದಿಃ 16.05.2022 ರಂದು ವನಜಾ ಎಂಬುವವರ ಹೆಸರಿನಲ್ಲಿ ನಿ.ಪಿ.18 ರಲ್ಲಿ ಆದ ವಹಿವಾಟಿನ ಬಗ್ಗೆ ವಿಚಾರಿಸಲಿಲ್ಲ, ಕಾರಣ ಆ ಬಗ್ಗೆ ದೂರು ಇರಲಿಲ್ಲ. ನಿ.ಪಿ.18 ಅನ್ನು ಈ ಕೇಸಿನ ತನಿಖೆಗಾಗಿ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿ.ಪಿ18 ದಾಖಲೆಯನ್ನು ಪಡೆದುಕೊಳ್ಳುವ ಮೊದಲೇ ಆರೋಪಿಯ ವಿರುದ್ದ ಪೂರ್ವ ಗ್ರಹ ಪೀಡಿತನಾಗಿದ್ದರಿಂದ (prejudice) ಆಗಿದ್ದರಿಂದ ವನಜಾ ಎಂಬುವವರ ವಹಿವಾಟಿನ ಬಗ್ಗೆ ವಿಚಾರಿಸಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.18 ಮತ್ತು ನಿ.ಪಿ.30 ಒಂದೇ ದಾಖಲೆಗಳು ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ಸ್ವೀಕರಿಸಿದ್ದೇನೆ, ಅಂತಿಮ ವರದಿಯನ್ನು ಚಾಸಾ.14 ರವರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.31 ರ ಕಾಲಂ ನಂಬರ್ 7 ರಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆ ಯಾರದ್ದು ಎಂದು ನನಗೆ ಗೊತ್ತಿಲ್ಲ.

21. ನಿ.ಪಿ.24 ರಲ್ಲಿ ಯಾವ ದಿನಾಂಕದಂದು ಖಾತೆಗೆ ಮೊಬೈಲ್ ಲಿಂಕ್ ಆಗಿದೆ ಎಂಬ ವಿವರ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಬ್ಯಾಂಕಿನವರು ಮೊಬೈಲ್ ಸಂಖ್ಯೆಯನ್ನು ನಮೂದಿಸಿದ್ದಾರೆ, ಮೊಬೈಲ್ ಲಿಂಕ್ ಆದ ದಿನಾಂಕವನ್ನು ತಿಳಿಸಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.22 ರಲ್ಲಿ ಯಾವುದೇ ಮೊಬೈಲ್ ಸಂಖ್ಯೆ ನಮೂದು ಮಾಡಿರುವುದು ಕಂಡು ಬರುವುದಿಲ್ಲ ಎಂದರೆ ಸರಿ. ನಿ.ಪಿ.32 ಕಾಲಂ ನಂಬರ್ 1 ರಲ್ಲಿ ನಮೂದಿಸಿರುವ ಖಾತೆಯ ಸಂಖ್ಯೆ ಅಕ್ಷರ ದಾಸೋಹ ಖಾತೆಗೆ ಸೇರಿದ್ದು ಆಗಿರುತ್ತದೆ. ಸದರಿ ಖಾತೆಯ ವಿವರವನ್ನು ನಾನು ನನ್ನ ತನಿಖಾ ಕಾಲದಲ್ಲಿ ತಾಲ್ಲೂಕು ಪಂಚಾಯಿತಿಯವರಿಗೆ ಕೇಳಿದ್ದೆ ಎಂದರೆ ಸರಿ.

22. ನಾನು ಅಮಾನತ್ತು ಪಡಿಸಿಕೊಂಡು ದಿನದಂದು ಯಾವ ರೀತಿಯಲ್ಲಿ ಇತ್ತೋ ಅದೇ ರೀತಿ ಮು.ಮಾ.1 ಮೊಬೈಲ್ ಇದೆ ಎಂದರೆ ಸರಿ. ನಾನು ವಶಪಡಿಸಿಕೊಂಡಿರುವ ಮೊಬೈಲ್ ನ ಮೇಲೆ ವಿಶೇಷ ಗುರುತನ್ನು ಮಾಡಿಲ್ಲ, ಪಂಚರ ಸಹಿಯನ್ನು ಮಾಡಿದ್ದೇನೆ. ನಾನು ಮೊಬೈಲ್ ಅನ್ನು ವಶಪಡಿಸಿಕೊಂಡಾಗ ಅದು ಚಾಲನಾ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಲ್ಲಿ 2 ಸಿಮ್ ಸ್ಲಾಟ್ ಇದ್ದವು. ನಾನು ವಶಪಡಿಸಿಕೊಂಡ ಮೊಬೈಲ್ ನಲ್ಲಿ 1 ಸಿಮ್ ಇತ್ತು. ಆ ಸಿಮ್ ಆ ಮೊಬೈಲ್ ನ ಯಾವ ಸ್ಲಾಟ್ ನಲ್ಲಿ ಇತ್ತು ಎಂದು ನಾನು ಸ್ಲಾಟ್ ಅನ್ನು ತೆಗೆಯದ ಕಾರಣ ನನಗೆ ಗೊತ್ತಿಲ್ಲ. ಮೊಬೈಲ್ ಅನ್ನು ವಶಪಡಿಸಿಕೊಂಡಾಗ ನಾನು ಸಿಮ್ ಸ್ಲಾಟ್ ಅನ್ನು ತೆಗೆದು ಅದರ ಯಾವ ಸ್ಲಾಟ್ ನಲ್ಲಿ ಸಿಮ್ ಗಳು ಇದೆ ಎಂದು ಪರಿಶೀಲಿಸಲಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮೊಬೈಲ್ dead, inoperated ಮೊಬೈಲ್ ಎಂದರೆ ಸರಿಯಲ್ಲ. ಮು.ಮಾ.1 ರಲ್ಲಿ ಇರುವ ಸಿಮ್ ಸಹ dead, inoperated ಸಿಮ್ ಆಗಿತ್ತು ಎಂದರೆ ಸರಿಯಲ್ಲ. ಮು.ಮಾ.1 ಅನ್ನು operate ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಎಲ್ಲೋ ಬಿದ್ದಿರುವಂತಹ dead, inoperated ಸಿಮ್ ಮತ್ತು ಮೊಬೈಲ್ ಅನ್ನು ಈ ಕೇಸಿಗೆ ಅಳವಡಿಸಿದ್ದೇನೆ ಎಂದರೆ ಸರಿಯಲ್ಲ.

23. ಸದರಿ ಮೊಬೈಲ್ ಅನ್ನು ಯಾರು ಎಲ್ಲಿ, ಯಾವಾಗ ಖರೀದಿ ಮಾಡಿದ್ದರು ಎಂದು ದಾಖಲೆಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಆ ಮೊಬೈಲ್ ತನಗೆ ಸೇರಿದ್ದು ಎಂದು ಆರೋಪಿ ಹೇಳಿದ್ದರಿಂದ ಆ ಬಗ್ಗೆ ವಿಚಾರಿಸಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನಗೆ ಮೊಬೈಲ್ ಅನ್ನು ನೀಡಿ ಮೊಬೈಲ್ ತನ್ನದ್ದು ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ರಸೀದಿಯನ್ನು ತೋರಿಸಿ ಸದರಿ ರಸೀದಿ ಮು.ಮಾ.1 ಮೊಬೈಲ್ ಗೆ ಸಂಬಂಧಿಸಿದ್ದು ಎಂದು ಕೇಳಲಾಗಿ ಸಾಕ್ಷಿ ರಸೀದಿಯನ್ನು ನೋಡಿ ಸಾಕ್ಷಿ ಮು.ಮಾ.1 ಮೊಬೈಲ್ ಗೆ ಆ ರಸೀದಿ ಸಂಬಂಧಿಸಿದ್ದು ಎಂದು ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ . ವಶಕ್ಕೆ

ಪಡೆದ ಮೊಬೈಲ್ ನ IMEI ನಂಬರ್ ಅನ್ನು ಮಾಲು ಪಟ್ಟಿಯಲ್ಲಿ ನಾನು ನಮೂದಿಸಿಲ್ಲ. ಮೊಬೈಲ್ ಅನ್ನು IMEI ನಂಬರ್ ಮೂಲಕ ಗುರುತಿಸಲಾಗುತ್ತದೆ ಎಂದರೆ ಸರಿ. ಒಂದೇ ಕಂಪನಿಗೆ ಸೇರಿದ ವಿವಿದ ಮಾಡೇಲ್ ಗಳು ಇರುತ್ತವೆ ಎಂದರೆ ಸರಿ. One plus touch screen ಮೊಬೈಲ್ ಎಂದು ಮೊಬೈಲ್ ನೋಡಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆ ರೀತಿ ಒಪ್ಪಿಕೊಂಡರೆ ತೊಂದರೆ ಆಗುತ್ತದೆ ಎಂಬ ಕಾರಣದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ದಿಃ 17.07.2022 ರಂದು ಚಾಸಾ.12 ರವರಿಂದ ಕಡತವನ್ನು ಪಡೆದು ಆರೋಪಿಯನ್ನು ಜನ್ನಾಪುರ ಸರ್ಕಲ್ ನಲ್ಲಿ ವಶಕ್ಕೆ ಪಡೆದು ಆರೋಪಿಯನ್ನು ಠಾಣೆಗೆ ತಂದು ಆತನ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು 2.15 ರ ಸುಮಾರಿಗೆ ಬಂಧಿಸಲಾಗಿತ್ತು. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದಾಗ 2.30 ರ ಸಮಯ ಆಗಿತ್ತು. ಆರೋಪಿಯ ಇಚ್ಛೆಗೆ ವಿರುದ್ದವಾಗಿ ಆತನ ಸ್ವಇಚ್ಛಾ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.47 ರಲ್ಲಿ ಇರುವ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ.

25. ಆರೋಪಿ ತಾನು ಮನೆಯಲ್ಲಿ ಇಟ್ಟ ಹಣವನ್ನು ತೋರಿಸುತ್ತೇನೆ ಎಂದು ಹೇಳಿದ್ದ, ನಾನು ಆರೋಪಿಯಿಂದ ದಿಃ 17.07.2022 ರಂದು ಹಣವನ್ನು ಮಹಜರ್ ಮಾಲಕ ಸಾಕ್ಷಿದಾರರ ಸಮಕ್ಷಮ ವಶಪಡಿಸಿಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಆರೋಪ ಮಾಡದೇ ಇದ್ದರು ಸಹ ವಿನಾಕಾರಣ ಆತನನ್ನು ದಸ್ತಗಿರಿ ಮಾಡಿ ಆತನ ಮೇಲೆ ಕ್ರಮ ಕೈಗೊಂಡಿದ್ದೇವೆ ಎಂದರೆ ಸರಿಯಲ್ಲ. ಬ್ಯಾಂಕಿನವರಿಗೆ, ಅಕ್ಷರ ದಾಸೋಹದವರಿಗೆ ದಾಖಲೆಗಳನ್ನು ನೀಡಬೇಕು ಎಂದು ನಿವೇದನೆಯನ್ನು ಸಲ್ಲಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ದಾಖಲೆಗಳನ್ನು ನೀಡುವಂತೆ ನೋಟೀಸು ನೀಡಿದ್ದೆ ಮತ್ತು ನ್ಯಾಯಾಲಯದ ಆದೇಶದಂತೆ 3 ಲಕ್ಷ ಹಣವನ್ನು ಆಕೆಗೆ ಬಿಡುಗಡೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಒತ್ತಡ ಏರಿ ಆತನಿಂದ ಛಲವಂತದಿಂದ 3 ಲಕ್ಷ ಹಣವನ್ನು ಕಿತ್ತುಕೊಂಡಿದ್ದೇವೆ ಎಂದರೆ ಸುಳ್ಳು. ಕೆನರಾ ಬ್ಯಾಂಕಿನಿಂದ ದಿಃ 22.02.2023 ರಂದು ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

26. ನಿ.ಪಿ.2 ರಿಂದ ನಿ.ಪಿ.49, ಮು.ಮಾ.1 ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳು ಈ ಕೇಸಿಗೆ ಸಂಬಂಧ ಪಡದೇ ಇದ್ದರು ಸಹ ಆರೋಪಿಯ ವಿರುದ್ದ ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕೃತ್ಯದಲ್ಲಿ ಭಾಗಿಯಾಗಿಲ್ಲ ಎಂದು ಕಂಡು ಬಂದರು ಸಹ ಆತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ